◆ **ಪಾಕಿಸ್ತಾನದ ವಿರುದ್ಧ ವಿಶ್ವಕಪ್‌ನಲ್ಲಿ ಆಡುವುದಿಲ್ಲ ಅಂತ ಹೇಳಿಕೆ ನೀಡಿದ್ದೀರಲ್ಲ ?**

ಹೌದು. ಎಲ್ಲಕ್ಕಿಂತ ನಮಗೆ ದೇಶವೇ ಮುಖ್ಯ. ಮಿಕ್ಕೆಲ್ಲವೂ ನಂತರ. ಏಪ್ರಿಲ್ 4ರಿಂದ 14ರವರೆಗೆ ಮಲೇಷ್ಯಾದಲ್ಲಿ ವಿಶ್ವಕಪ್ ಕಬಡ್ಡಿ ಪಂದ್ಯಾವಳಿ ನಡೆಯಲಿದೆ. ಆದರಲ್ಲಿ ನಾವು ಯಾವುದೇ ಕಾರಣಕ್ಕೂ ಪಾಕಿಸ್ತಾನ ಕಬಡ್ಡಿ ತಂಡದ ವಿರುದ್ಧ ಆಡದಿರಲು ತೀರ್ಮಾನಿಸಿದ್ದೇವೆ. ವಿಶ್ವಕಪ್‌ನಲ್ಲಿ ಒಟ್ಟು 32 ತಂಡಗಳು ಸ್ಪರ್ಧಿಸಲಿವೆ. ಭಾರತವು ಆಸ್ಟ್ರೇಲಿಯಾ, ಪೆರು ಹಾಗೂ ಆಸ್ಟ್ರಿಯಾಗಳ ಗುಂಪಿನಲ್ಲಿದೆ. ಲೀಗ್ ಹಂತದಲ್ಲಿ ಭಾರತ–ಪಾಕ್ ಮುಖಾಮುಖಿಯಾಗುವುದು ಅನುಮಾನ. ಒಂದು ವೇಳೆ ಫೈನಲ್‌ನಲ್ಲಿ ಎದುರಾಳಿಯಾಗಿ ಸ್ಪರ್ಧಿಸಬೇಕಾದ ಪರಿಸ್ಥಿತಿ ನಿರ್ಮಾಣವಾದರೆ ಭಾರತ ಖಂಡಿತಾ ಒಪ್ಪುವುದಿಲ್ಲ.



INDO INTERNATIONAL PREMIER KABADDI LEAGUE

ಸಮ್ಮೇಳನವನ್ನು ಪ್ರತಿನಿಧಿಸಿದ್ದವು. ಆ ಎಲ್ಲ ದೇಶಗಳ ಪ್ರತಿನಿಧಿಗಳು ಕಬಡ್ಡಿಯನ್ನು ಒಲಿಂಪಿಕ್‌ಗೆ ಸೇರಿಸಬೇಕು ಎಂಬುದರ ಬಗ್ಗೆ ಒಮ್ಮತದ ನಿರ್ಧಾರ ಕೈಗೊಂಡಿವೆ. ಅದರ ಮೂಲಕ 'ಒಲಿಂಪಿಕ್‌ಗಾಗಿ ಧ್ವನಿ ಎತ್ತಿ' ಎಂಬ ಧ್ಯೇಯವಾಕ್ಯ ಘೋಷಿಸಲಾಗಿದೆ. ಮುಂದಿನ 8 ವರ್ಷಗಳಲ್ಲಿ ಒಲಿಂಪಿಕ್‌ನಲ್ಲಿ ಕಬಡ್ಡಿ ಕಾಣುವುದು ಶತಸಿದ್ಧ.

◆ **ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾದಂತೆ ಎಕೆಎಫ್‌ಐ–ಎನ್‌ಕೆಎಫ್‌ಐ ಕಿತ್ತಾಟದಲ್ಲಿ ಕಬಡ್ಡಿ ಸೊರಗಿತೆ?**

ಖಂಡಿತಾ ಇಲ್ಲ. ಕಬಡ್ಡಿಯನ್ನು ಬೆಳೆಸಬೇಕು ಹಾಗೂ ಆಟಗಾರರ ಭವಿಷ್ಯವನ್ನು ವೃದ್ಧಿಸಬೇಕೆಂಬ ಗುರಿಯೊಂದಿಗೆ 'ಎನ್‌ಕೆಎಫ್‌ಐ' ಶ್ರಮಿಸುತ್ತಿದೆ. ಸರ್ಕಾರದಿಂದ ಯಾವುದೇ ರೀತಿಯ ಆರ್ಥಿಕ ಸೌಲಭ್ಯ ಪಡೆಯದೇ ಸಂಸ್ಥೆ ವತಿಯಿಂದಲೇ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಸ್ಥಳೀಯ ಮಟ್ಟದಿಂದ ರಾಷ್ಟ್ರೀಯ ಮಟ್ಟದವರೆಗೆ ಪಂದ್ಯಾವಳಿಗಳನ್ನು ಆಯೋಜಿಸುತ್ತಿದೆ.

◆ **'ಐಐಪಿಕೆಎಲ್'ನ ರೂಪುರೇಷೆ ಬಗ್ಗೆ ತಿಳಿಸಿ ಕೊಡಿ ?**

'ಐಐಪಿಕೆಎಲ್'ನಲ್ಲಿ ಒಟ್ಟು ಎಂಟು ತಂಡಗಳು ಭಾಗವಹಿಸಲಿವೆ. ಬೆಂಗಳೂರು ರೈನೋಸ್, ತೆಲುಗು ಬುಲ್ಸ್, ಚೆನ್ನೈ ಚಾಲೆಂಜರ್ಸ್, ದಿಲ್ಲೇರ್ ಡೆಲ್ಲಿ, ಹರಿಯಾಣ ಹೀರೋಸ್, ಮಹಾರಾಷ್ಟ್ರ ಮರಾಠಾಸ್, ಬೆಂಗಾಲ್ ವಾರಿಯರ್ಸ್ ಹಾಗೂ ರಾಜಸ್ಥಾನ ರಜಪುತ್. ಈ ಎಂಟೂ ತಂಡದ ಮಾಲೀಕರ ಹೆಸರು ಸದ್ಯಕ್ಕೆ ಬಹಿರಂಗಗೊಳಿಸಿಲ್ಲ. ಬೆಂಗಳೂರು, ದೆಹಲಿ, ರಾಂಚಿ ಹಾಗೂ ಚೆನ್ನೈನಲ್ಲಿ ಲೀಗ್‌ನ ಪಂದ್ಯಗಳು ಜರುಗಲಿವೆ. ಅನಿವಾರ್ಯ ಸಂದರ್ಭಗಳಲ್ಲಿ ಪಂದ್ಯಗಳನ್ನು ಸ್ಥಳಾಂತರಗೊಳಿಸುವ ಸ್ಥಿತಿ ಎದುರಾಗಬಹುದು ಎಂಬ ಕಾರಣಕ್ಕೆ ಪಂಜಾಬ್ ಹಾಗೂ ನಾಗಪುರದಲ್ಲೂ ಪಂದ್ಯಗಳನ್ನು ನಡೆಸಲು ಎನ್‌ಕೆಎಫ್‌ಐ ನಿರ್ಧರಿಸಿದ್ದು, ಈ ಎಲ್ಲ ಸ್ಥಳಗಳಲ್ಲಿ ಒಟ್ಟು 62 ಪಂದ್ಯಗಳು ನಡೆಯಲಿವೆ.

◆ **ಪ್ರೊ ಕಬಡ್ಡಿ ಲೀಗ್‌ನಲ್ಲಿ ಪಾಲ್ಗೊಂಡಿದ್ದ ಆಟಗಾರರಿಗೂ ಅವಕಾಶ ಇದೆಯೇ?**

ಹೌದು. ಪ್ರೊ ಕಬಡ್ಡಿ ಲೀಗ್‌ನಲ್ಲಿ ಪಾಲ್ಗೊಂಡಿದ್ದ 38 ಆಟಗಾರರು ನಮ್ಮ ಲೀಗ್‌ನಲ್ಲಿ ಪಾಲ್ಗೊಳ್ಳಲು ಹೆಸರು ನೋಂದಾಯಿಸಿದ್ದರು. ಅವರಲ್ಲಿ 18 ಆಟಗಾರರನ್ನಷ್ಟೇ ಆಯ್ಕೆ ಮಾಡಿಕೊಂಡಿದ್ದೇವೆ.

◆ **ವಿದೇಶಿ ಆಟಗಾರರೂ ಇರುವರೇ?**

ಒಲಿಂಪಿಕ್‌ಗೆ ಕಬಡ್ಡಿ ಸೇರಿಸಬೇಕು ಎಂಬ ಆಸೆವುಳ್ಳ ವಿದೇಶಿ ಅರ್ಹ 30 ಆಟಗಾರರಿಗೆ 'ಐಐಪಿಕೆಎಲ್'ನಲ್ಲಿ ಅವಕಾಶ ಕಲ್ಪಿಸಲಾಗಿದೆ. ಪ್ರತಿ ತಂಡದಲ್ಲಿ ಮೂವರು ವಿದೇಶಿ ಆಟಗಾರರು ಇರಲಿದ್ದಾರೆ. ಹೆಚ್ಚುವರಿಯಾಗಿ ಪ್ರತಿ ತಂಡಕ್ಕೂ ಒಬ್ಬೊಬ್ಬರನ್ನು ನೀಡಲಾಗುತ್ತದೆ.

◆ **ಆಟಗಾರರ ಆಯ್ಕೆ ವಿಧಾನ ಹೇಗೆ?**

ಅರ್ಜುನ ಪ್ರಶಸ್ತಿ ಪುರಸ್ಕೃತ ಕಬಡ್ಡಿ ಕ್ರೀಡಾಪಟುಗಳು, ಅಂತರರಾಷ್ಟ್ರೀಯ ಮಟ್ಟದ ಮಾಜಿ ಕ್ರೀಡಾಪಟುಗಳು, ಮಾಜಿ ಕೋಚ್‌ಗಳು ಹಾಗೂ ಕಬಡ್ಡಿಗಾಗಿ ಜೀವನವನ್ನೇ ಮೀಸಲಿಟ್ಟವರ ನೇತೃತ್ವದಲ್ಲಿ ಆಯ್ಕೆಸಮಿತಿ ರಚಿಸಲಾಗಿದೆ. ಆ ಸಮಿತಿಯ ಸದಸ್ಯರು ಪಾರದರ್ಶಕವಾಗಿ ಆಟಗಾರರನ್ನು ಅಂತಿಮ ಸುತ್ತಿಗೆ ಆಯ್ಕೆಮಾಡಿದ್ದಾರೆ. ಆಟಗಾರರನ್ನು ಆಯ್ಕೆ ಮಾಡುವುದರ ಜೊತೆಗೆ ಅವರ ಪ್ರದರ್ಶನ ಹಾಗೂ ಸಾಮರ್ಥ್ಯದ ಆಧಾರದ ಮೇಲೆ ಅವರನ್ನು ಎ, ಬಿ, ಸಿ ಗ್ರೇಡ್‌ಗಳನ್ನು ನೀಡಲಾಗುತ್ತದೆ. ಅಂತಿಮ ಸುತ್ತಿಗೆ ಆಯ್ಕೆಯಾಗದ ಉತ್ತಮ 50 ಆಟಗಾರರನ್ನು ಹೆಚ್ಚುವರಿ ಆಟಗಾರರನ್ನಾಗಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ. 'ಐಐಪಿಕೆಎಲ್'ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ಪುರುಷ–ಮಹಿಳಾ ಕ್ರೀಡಾಪಟುಗಳನ್ನು ಮಲೇಷ್ಯಾದ ನೆಲೆಕಾದಲ್ಲಿ ಏಪ್ರಿಲ್ 1 ರಿಂದ ನಡೆಯಲಿರುವ ಕಬಡ್ಡಿ ವಿಶ್ವಕಪ್ ಟೂರ್ನಿಗೆ ಆಯ್ಕೆ ಮಾಡಲಾಗುತ್ತದೆ.

◆ **ಆಟಗಾರರಿಗೆ ನೀಡುವ ಸಂಭಾವನೆ ಎಷ್ಟು ?**

ಅಂತಿಮ ಸುತ್ತಿಗೆ ಆಯ್ಕೆಯಾದ ಆಟಗಾರರನ್ನು ಗ್ರೇಡ್‌ಗಳ ಆಧಾರದ ಮೇಲೆ ವಿಂಗಡಿಸಿ, ಸಂಭಾವನೆ ನೀಡಲಾಗುತ್ತದೆ. 'ಎ' ಗ್ರೇಡ್ ಆಟಗಾರರಿಗೆ 10 ಲಕ್ಷ ರೂಪಾಯಿ, 'ಬಿ' ಗ್ರೇಡ್ ಆಟಗಾರರಿಗೆ 8 ಲಕ್ಷ ಹಾಗೂ 'ಸಿ' ಗ್ರೇಡ್ ಆಟಗಾರರಿಗೆ 6 ಲಕ್ಷ ರೂಪಾಯಿ ಸಂಭಾವನೆಯನ್ನು ಒಂದು ಲೀಗ್‌ಗೆ ನಿಗದಿ ಮಾಡಲಾಗಿದೆ. ಹೆಚ್ಚುವರಿ ಆಟಗಾರರ ಭವಿಷ್ಯದ ದೃಷ್ಟಿಯಿಂದ ಅವರ ಖರ್ಚು ವೆಚ್ಚ ನೋಡಿಕೊಳ್ಳುವುದರ ಜೊತೆಗೆ ತಲಾ ₹ 2 ಲಕ್ಷದಿಂದ ₹ 4 ಲಕ್ಷದವರೆಗೆ ಸಂಭಾವನೆ ನೀಡಲಾಗುತ್ತದೆ. ಲೀಗ್‌ನಿಂದ ಬರುವ ಆದಾಯದ ಶೇ. 20ರಷ್ಟನ್ನು ಆಟಗಾರರಿಗೆ ಸಮಾನವಾಗಿ ಹಂಚಲು ಫೆಡರೇಷನ್ ನಿರ್ಧರಿಸಿದೆ. ಶೇಕಡ 10ರಷ್ಟು ಆದಾಯವನ್ನು ಮಾಜಿ ಆಟಗಾರರ ಕ್ಷೇಮಾಭಿವೃದ್ಧಿ ಒಕ್ಕೂಟಕ್ಕೆ ಹಾಗೂ ಶೇಕಡ 20ರಷ್ಟು ಆದಾಯವನ್ನು ವಿವಿಧ ರಾಜ್ಯಗಳಲ್ಲಿ ಕಬಡ್ಡಿಯನ್ನು ಪ್ರೋತ್ಸಾಹಿಸುವ ಸಲುವಾಗಿ ಬಳಸಲಾಗುತ್ತದೆ.

◆ **ಮಹಿಳಾ ಕ್ರೀಡಾಪಟುಗಳ ಬಗ್ಗೆ 'ಎನ್‌ಕೆಎಫ್‌ಐ' ನಿರ್ಲಕ್ಷ್ಯ ತೋರಿದಂತಿದೆ ಅಲ್ಲವೇ?**

ಖಂಡಿತ ಇಲ್ಲ. 'ಐಐಪಿಕೆಎಲ್' ಇದೇ ಮೊದಲ ಬಾರಿಗೆ ಪ್ರಾರಂಭವಾಗುತ್ತಿದೆ. ಹೀಗಾಗಿ, ಈ ಬಾರಿ ಪುರುಷರಿಗಷ್ಟೇ ಅವಕಾಶ ಕಲ್ಪಿಸಲಾಗಿದೆ. ಮಹಿಳಾ ಕ್ರೀಡಾಪಟುಗಳಿಗೆ ಮುಂದಿನ ಬಾರಿ ಅವಕಾಶ ಕಲ್ಪಿಸಲಾಗುತ್ತದೆ. ಅವರನ್ನು ಉತ್ತೇಜಿಸುವ ಸಲುವಾಗಿ ಈ ಬಾರಿಯ ಲೀಗ್‌ನ ಪ್ರತಿ ಪಂದ್ಯದ ಆರಂಭಕ್ಕೂ ಮುನ್ನ ಹಾಗೂ ಅಂತ್ಯದ ಬಳಿಕ ಮಹಿಳೆಯರ ಅಭ್ಯಾಸ ಪಂದ್ಯಗಳನ್ನು ನಡೆಸಲಾಗುತ್ತದೆ.

◆ **ನ್ಯೂ ಕಬಡ್ಡಿ ಫೆಡರೇಷನ್ ಆಫ್ ಇಂಡಿಯಾದ ಬಗ್ಗೆ ಹೇಳುವುದಾದರೆ....**

ಒಲಿಂಪಿಕ್‌ಗೆ ಕಬಡ್ಡಿ ಸೇರಿಸಬೇಕು ಎಂಬ ಗುರಿಯೊಂದಿಗೆ ಅರ್ಜುನ ಪ್ರಶಸ್ತಿ ಪುರಸ್ಕೃತ ಹದಿನಾರು ಆಟಗಾರರ ಸ್ವಂತ ಆಸಕ್ತಿ ಮೇರೆಗೆ ಈ ಸಂಸ್ಥೆ ಅಸ್ತಿತ್ವಕ್ಕೆ ಬಂದಿದೆ. ಇದು, ಈಗಾಗಲೇ ಅಂತರರಾಷ್ಟ್ರೀಯ ಮಟ್ಟದ 9 ಟೂರ್ನಿಗಳಲ್ಲಿ ಪಾಲ್ಗೊಂಡಿದೆ. ■